**<u>ಸಾಕ್ಷಿಗೆ ದಿನಾಂಕ *15-07-2023* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಟಿ. ಎಂ. ಸಿ. ವಕೀಲರಿಂದಃ</u>**

ನಿಪಿ 8ಃ ವೈದ್ಯಕೀಯ ಬಿಲ್ಲುಗಳು.

ನಿಪಿ 9ಃ Case sheet ಮತ್ತು ಔಷದಗಳನ್ನು ಬರೆದ ಬಗ್ಗೆ ಇರುವ ಮೂರು ಪುಟಗಳು.

ನಿಪಿ 10 ರಿಂದ 19ಃ ಔಷದ ಚೀಟಿಗಳು.

ನಿಪಿ 20 ರಿಂದ 39ಃ ವೈದ್ಯಕೀಯ ಬಿಲ್ಲುಗಳು.

ನಿಪಿ 40ಃ Discharge Card

ನಿಪಿ 41ಃ ಒಟ್ಟು ಮೂರು ಎಕ್ಸರೇ ವರದಿಗಳು.

ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರು ಏಕ ತರ್ಪೆ ಇರುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.

<u>ಸಾಕ್ಷಿಗೆ ದಿನಾಂಕ *05-04-2024* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್. ಎಸ್. ಹೆಚ್. ವಕೀಲರಿಂದ.**

ನಾನು ಶಾಲೆ ಕಲಿತಿರುವುದಿಲ್ಲ. ನನ್ನ ವಯಸ್ಸನ್ನು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನನಗೆ 55-56 ವಯಸ್ಸು ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ 34 ವರ್ಷ ವಯಸ್ಸು ಎಂದು ಹೇಳುತ್ತಾರೆ. ನನಗೆ 55 ವರ್ಷ ಆಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣವನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಗೌಂಡಿ ಕೆಲಸ ಮಾಡುತ್ತೇನೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನಗೆ 34 ವರ್ಷ ಇರುತ್ತದೆ ಮತ್ತು ಗೌಂಡಿ ಕೆಲಸ ಮಾಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ದಿನಾಂಕ 28-09-2021 ರಂದು ಆಗಿರುತ್ತದೆ. ಆ ದಿನ ನಾನು ಮನೆಯಿಂದ ಲಕ್ಷ್ಮೀ ನಗರದ ಕಡೆಗೆ ಹೋಗುತ್ತಿದ್ದೇನು. ರಾಷ್ಟ್ರೀಯ ಹೆದ್ದಾರಿಯಲ್ಲಿ ಗ್ರಿಲಗಳನ್ನು ಹಾಕಿದ್ದರು ಎಂದರೆ ಸರಿಯಲ್ಲ. ನಾನು ಡಾಂಬರ ರಸ್ತೆಯ ಮೇಲೆ ನಿಂತುಕೊಡಿದ್ದೆ ಎಂದರೆ ಸರಿಯಲ್ಲ. ನಾನು ನಿಂತು ಕೊಂಡಿದ್ದಾಗ ಮೋಟರ ಸೈಕಲ ಚಾಲಕನು ಅಡ್ಡ ಬಂದು ಅಪಘಾತ ಪಡಿಸಿರುತ್ತಾನೆ. ನಾನು ಹೋಗುವಂತಹ ಮೊಟರ ಸೈಕಲಗೆ ಡಿಕ್ಕಿ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನನ್ನು ಎನ್. ಆರ್. ಪಾಟೀಲ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆ ದಿನ ಪೋಲಿಸರು ಆಸ್ಪತ್ರೆಗೆ ಬಂದಿದ್ದರು. ದೂರನ್ನು ನಾನು ನೀಡಿರುತ್ತೇನೆ. ನಾನು ಆಸ್ಪತ್ರೆಯಲ್ಲಿ 10 ದಿನಗಳ ಕಾಲ ಒಳ ರೋಗಿಯಾಗಿ ಇದ್ದೇನು. ನನಗೆ ಅಪಘಾತವಾಗಿರುತ್ತದೆ ಎಂದು ಮತ್ತು ನಾನು 10 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ಮತ್ತು 2 ಲಕ್ಷ ರೂಪಾಯಿಗಳ ಆಸ್ಪತ್ರೆಯ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರತಿ ತಿಂಗಳು 20,000/- ರೂಪಯಿಗಳ ಆದಾಯ ಇದೆ ಎಂದು ತೋರಿಸಕು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಅಪಘಾತದಿಂದ ನನಗೆ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ತೊಂದರೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಬಿದ್ದು ಗಾಯ ಮಾಡಿಕೊಂಡಿದ್ದರಿಂದ ವಿಮಾ ಕಂಪನಿಯವರು ಪರಿಹಾರದ ಹಣವನ್ನು ಕೂಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಬೈಕ ಚಾಲಕನು ಮತ್ತು ನನಗೆ ಒಳ್ಳೆ ಗೆಳೆತನ ಇರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಮತ್ತು ಅವರು ಮಾತನಾಡಿಕೊಂಡು ದೂರು ನೀಡಿರುತ್ತೇವೆ ಎಂದರೆ

ಸರಿಯಲ್ಲ. ಆಸ್ಪತ್ರೆಯ ಬಿಲ್ಲುಗಳು ಮತ್ತು ಸಲಹಾ ಚೀಟಿಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ಬಿಲ್ಲುಗಳ ಮೇಲೆ ಮತ್ತು ಸಲಹಾ ಚೀಟಿಗಳ ಮೇಲೆ ಆಸ್ಪತ್ರೆಯ ನೊಂದಣಿ ಸಂಖ್ಯೆ ಮತ್ತು ವೈದ್ಯರ ನೊಂದಣಿ ಸಂಖ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.